ಶ್ರೀ ಡಿ. ದೇವರಾಜ ಅರಸ್.—ತಮಗೇನು ಅನುಮಾನವಿದೆಯೆಂಬುದು ಗೊತ್ತಾದಮೇಲೆ ಆ ಅನುಮಾನಕ್ಕೆ ಆಸ್ಪದವಿಲ್ಲದಿರುವ ಹಾಗೆ ಎನ್‌ಕ್ವೈರಿ ನಾವು ಮಾಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಒಂದು ಪ್ರಶ್ನೆ. ಅರಸೀಕೆರೆ ಮತ್ತು ಹಾಸನದಲ್ಲಿ ಹುಡುಗರು ಪ್ರಜ್ಞೋದನೆ ಮಾಡಿದರೆಂದು. ಗಲಾಟೆ ಪ್ರಾರಂಭವಾಗಿದೆಯೆಂದು ಹೇಳೋಣವಾಗಿದೆ. ಅರಸಿಕೆರೆಯಲ್ಲಿ ಮನೆ ಮನೆಗೆ ನುಗ್ಗಿ ಜನರಿಗೆ ತೆ ೦ದರೆ ಕೊಟ್ಟಿದ್ದಾರೆ. *

ಶ್ರೀ ಡಿ. ದೇವರಾಜ ಅರಸ್.—ಪೋಲೀಸರಿಗೆ ಅವರು ಮಾಡಿರುವುದನ್ನೂ ಗಮನಿಸಿ.

ಶ್ರೀ ವಾಟಾಳ್ ನಾಗರಾಜ್.—ಅರಸೀಕೆರೆ, ಬೆಂಗಳೂರು, ಚಿಕ್ಕಮಗಳೂರು ಹೀಗೆ ಎಲ್ಲಾ ಕಡೆಗಳಲ್ಲೂ ಪೋಲೀಸರು ದೌರ್ಜನ್ಯ ನಡೆಸಿದ್ದಾರೆ. ಇದು ಈ ದಿವಸದ್ದಲ್ಲ.

ಅಧ್ಯಕ್ಷರು.—ಬೇರೆ ವಿಷಯವನ್ನು ಇಲ್ಲಿ ಕೂಡಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ವಿದ್ಯಾರ್ಥಿಗಳ ಮೇಲೆ ಕಾರಣವಿಲ್ಲದ ಲಾಟಿ ಛಾರ್ಜ್, ಟೇರ್‌ಗ್ಯಾಸ್ ಬಿಡುವುದು, ಗೋಲಿಬಾರ್ ಮಾಡುವುದು ನಡೆಯುತ್ತಿದೆ. ಪೋಲೀಸರನ್ನು ಹಿಡಿತದಲ್ಲಿಟ್ಟು ಕೊಳ್ಳಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈಗ ಒಂದು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ನೀವೂ ಹೀಗೆ ಹೇಳಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ಭೇದಭಾವವೇಕೆ ? ನಾವು ಮಾತನಾಡುವುದೆನ್ನು ಒಂದೊಂದು ಸಲ ನೋಡಿದರೆ ಕಪಾಳಕ್ಕೆ ಹೊಡೆದ ಹಾಗಾಗುತ್ತದೆ. ಇದನ್ನು ನೋಡಿ ವ್ಯಥೆಯಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಕೇಶವನ್ನು ಬೆಳೆಸಿರುವುದನ್ನು ನೋಡಿದರೆ ಅನುಮಾನ ಬರುತ್ತಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇಂದು ಮಾನ್ಯ ಮುಖ್ಯಮಂತ್ರಿಗಳು ಒಂದು ನಿಷ್ಪಕ್ಷಪಾತವಾದ ವಿಚಾರಣೆಯನ್ನು ಹಾಸನದ ಪ್ರಕರಣ ಬಗ್ಗೆ ಮಾಡಿಸುತ್ತೇನೆಂದು ವಾಗ್ದಾನಮಾಡಿದ್ದು ನಮಗಂತೂ ಹಿತವಾಯಿತು. ಆದರೆ ಈ ಪ್ರಕರಣವನ್ನು ಸಭೆಯ ಮುಂದೆ ತಂದಾಗ ಅಂದು ಮುಖ್ಯಮಂತ್ರಿಗಳಿರಲಿಲ್ಲ. ತಾವು ಉಪಸ್ಥಿತರಿದ್ದಿರಿ, ಆಗ ಯಾವ ರೀತಿ ಸರಕಾರದ ಪರವಾಗಿ ಪ್ರತಿಕ್ರಿಯೆ ಬಂತು ಎಂಬುದನ್ನು ತಮ್ಮ ಸ್ಮರಣೆಗೆ ತಂದುಕೊಳ್ಳಬೇಕು. ನಾವು ಹೇಳುವುದೆಲ್ಲಾ ಸುಳ್ಳು ಎಂಬ ಧಾಟಿಯಲ್ಲಿ ನಮ್ಮನ್ನು ಪ್ರತಿಭಟಿಸಿದರು.

ಅಧ್ಯಕ್ಷರು.—ಯಾರೂ ಹಾಗೆ ಮಾಡಲಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾವೂ ಸಹ ಜವಾಬ್ದಾರಿಯಿಂದ ವರ್ತಿಸುತ್ತೇವೆ, ಘನತೆ ಗಾಂಭೀರ್ಯದಿಂದ ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಇಂಥ ಪ್ರಕರಣಗಳಿಗೆ ಅವಕಾಶ ಕೊಡಬಾರದು. ಇಂಥ ಪ್ರವೃತ್ತಿಯನ್ನು ಮೊಟಕು ಮಾಡಬೇಕು. ಹಾಗೆ ಮಾಡುವರೆಂದು ನಂಬುತ್ತೇನೆ.

MADAM SPEAKER.—I withhold my consent to the adjournment motion.

Affairs of the REMCO Manegement

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ರೆಂಕೋ ಕಾರ್ಖಾನೆಯ ಬಗ್ಗೆ ನಾನೊಂದು ನೊಟೀಸು ಕೊಟ್ಟಿದ್ದೇನೆ. ಇದರ ವಿಚಾರದಲ್ಲಿ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಮೂರು ಮುಖ್ಯ ಪ್ರಶ್ನೆಗಳಿವೆ. ಮಂತ್ರಿಗಳಿಗೆ ಸಂಬಂಧಪಟ್ಟ ಒಂದು ವಿಚಾರ ಬರೆದಿದ್ದಾರೆ

*Matter not Recorded as ordered by the Chair

ಅಧ್ಯಕ್ಷರು.—ಅದನ್ನು ಬರೆದುಕೊಳ್ಳಬೇಡಿ.

ಈ ಕಾರ್ಖಾನೆಯನ್ನು ಮೂರುನಾಲ್ಕು ಭಾಗಗಳಾಗಿ ವಿಂಗಡಿಸಿ ಮಾರಾಟ ಮಾಡಲು ಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ, ಬಿರ್ಲ, ಫಿಲಪ್ ಸಂಸ್ಥೆ, ಪಲನ್ ಮುಂತಾದವರಿಗೆ ಮಾರುವುದಾಗಿ ಪತ್ರಿಕೆಯಲ್ಲಿ ಪ್ರಕಟವಾಗಿದೆ ಅಲ್ಲದೆ ಕೆಲಸಗಾರರನ್ನು ರಿಟ್ರೆಂಚ್ ಮಾಡುವರು ಎಂಬ ಅಭಿಪ್ರಾಯವಿದೆ. ಈಗ ಕೆಲಸ ನಡೆಯುತ್ತಿಲ್ಲ ಇದನ್ನು ಗಮನಕ್ಕೆ ತೆಗೆದುಕೊಂಡು ಮಂತ್ರಿಗಳು ಒಂದು ಹೇಳಿಕೆ ಕೊಟ್ಟರೆ, ಸಮಜಾಯಿಷಿ ನೀಡಿದರೆ ಸ್ವಲ್ಪ ನೆಮ್ಮದಿಯಾಗುವುದು. ಆದುದರಿಂದ ಹಾಗೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೆ ನೆ.

2-30 P.M.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಸಚಿವರು).— ಮಾನ್ಯ ಅಧ್ಯಕ್ಷರೆ; ನಮ್ಮ ರೆಂಕೋ ಕಾರ್ಖಾನೆಯನ್ನು ಖಾಸಗಿ ಜನರಿಗೆ ವಹಿಸುತ್ತಾರೆಂಬ ಕೆಲವು ವರದಿಗಳು ಕೆಲವು ಪತ್ರಿಕೆಗಳಲ್ಲಿ ಬಂದಿರುತ್ತವೆ ನಾನು ಈಗಾಗಲೇ ಆ ವರದಿಗಳೆಲ್ಲಾ ನಿರಾಧಾರವಾದವುಗಳೆಂದು ಸ್ಪಷ್ಟಪಡಿಸಿದ್ದೇನೆ ಮತ್ತು ಈ ನಮ್ಮ ಕೈಗಾರಿಕೆಗಳ ಬಗ್ಗೆ ಸರ್ಕಾರದವರ ನಿಲುವು ಹಾಗೂ ಧೋರಣೆಗಳೇನೆಂಬುದನ್ನು ಇದೇ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಸ್ಪಷ್ಟಪಡಿಸಿದ್ದೇನೆ. ಸರ್ಕಾರದವರು ತಮ್ಮ ಯಾವ ಒಂದು ಕೈಗಾರಿಕೋದ್ಯಮವನ್ನೂ ಟಾಟರವರಿಗಾಗಲಿ, ಬಿರ್ಲಾರವರಿಗಾಗಲಿ ಅಥವಾ ಇನ್ನಾವ ಖಾಸಗೀ ಜನರಿಗಾಗಲಿ ಬಿಟ್ಟುಕೊಡುವುದಂ ನಮ್ಮ ಸರ್ಕಾರದ ನೀತಿಯಲ್ಲ ಎಂದು ಸ್ಪಷ್ಟಪಡಿಸಿದ್ದೇನೆ ಆದಾಗ್ಯೂ ಕೆಲವು ಪತ್ರಿಕೆಗಳು ದುರುದ್ದೇಶದಿಂದ ಕುಚೋದ್ಯದಿಂದ ಹೀಗೆ ವರದಿಗಳನ್ನು ಮಾಡಿವೆ. ಇಂಥ ವರದಿಗಳಿಗೆ ಒಂದು ಪೂರ್ಣ ವಿರಾಮ ನೀಡುವುದಕ್ಕಾಗೇ ನಾನೀಗ ಇನ್ನೊಮ್ಮೆ ಸರ್ಕಾರದವರು, ಈ ರೆಂಕೋ ಕಾರ್ಖಾನೆಯನ್ನಾಗಲೀ ಅಥವಾ ಇನಾ ವ ಸರ್ಕಾರಿ ವಲಯದಲ್ಲಿರತಕ್ಕ ಕಾರ್ಖಾನೆಯನ್ನೇ ಆಗಲಿ ಈ ಸರ್ಕಾರ ಇರುವತನಕ ಯಾರಿಗೂ ಬಿಟ್ಟುಕೊಡುವುದಿಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

Supply of Yarn to the Weavers.

ಶ್ರೀ ಪಿ. ಎಂ. ಭಾಂಗಿ (ಜಮಖಂಡಿ).— ಮಾನ್ಯ ಅಧ್ಯಕ್ಷರೆ ನಾನು ತಮ್ಮ ಕಡೆಗೆ ನೇಕಾರರಿಗೆ ಅತ್ಯಗತ್ಯವಾಗಿ ಬೇಕಾದ ನೂಲು ದೊರೆಯುತ್ತಿಲ್ಲ, ಸಾವಿರಾರು ಜನ ನೇಕಾರರಿಗೆ ತೊಂದನ ಉಂಟಾಗಿದೆ ಎನ್ನತಕ್ಕ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ನೋಡೋಣ.

Food scarcity in the State.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).— ಮಾನ್ಯ ಅಧ್ಯಕ್ಷರೇ : ಈ ಸಭೆ ಇದೇ ತಿಂಗಳು ೧೫ನೇ ತಾರೀಖು ಮುಕ್ತಾಯವಾಗುತ್ತದೆಂದು ವರ್ತಮಾನವಿದೆ. ಆದುದರಿಂದ ದೇಶದಲ್ಲಿ ಉಂಟಾಗಿರತಕ್ಕ ಆಹಾರದ ಆಭಾವದ ಬಗ್ಗೆ ಚರ್ಚೆ ನಡೆಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗಿದೆ. ಅಲ್ಲದೆ ಇನ್ನೂ ಕೆಲವು ಆರ್ಡಿನೆನ್ಸ್‌ಗಳ ಬಗ್ಗೆ ಮಸೂದೆಗಳು ಬರಬೇಕಾಗಿದೆ, ಇವುಗಳ ಚರ್ಚೆಗೆ ಅವಕಾಶ ಮಾಡಿಕೋಡಬೇಕಾಗಿ ಪ್ರಾರ್ಥನೆ.

Distrubances at Belgaum in July 1973.

Sri B. N. SARDESAI (Khanapur).— Madam Speaker. I rise to bring to your kind notice that a distorted version of the real happenings at Belgaum on 23rd July 1973 has been furnished to the State Government and relying on that twisted reports of the local Officers our Chief Minister has made a statement on the floor of this Assembly. If he had gone into details and found out the truth, he would not have made those allegations or condemned the MES at Belgaum. That